# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 5703/2017

| | |
|---|---|
| ಸಾಕ್ಷಿದಾರರ ಹೆಸರು | ಜಗಜೀವನದಾಸ ಬಂಡಾರಿ |
| ತಂದೆಯ ಹೆಸರು | ಸಂಕಪ್ಪ ಬಂಡಾರಿ |
| ವಯಸ್ಸು | 64 ವರ್ಷ |
| ಉದ್ಯೋಗ | ನಿವೃತ್ತ ಉಪನಿರ್ದೇಶಕರು, ಪದವಿ ಪೂರ್ಣ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ. |
| ವಾಸ | ಶಂಕರನಾರಾಯಣ ಗ್ರಾಮ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ. |
| ಪ್ರಮಾಣೀಕರಿಸಿದ ದಿನಾಂಕ | 02/12/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ಫೆಬ್ರುವರಿ 2016 ರಲ್ಲಿ ಹಿಂದೆ ಇದ್ದ ರಾಮು ಎಂಬ ಸರ್ಕಾರಿ ಪದವಿ ಪೂರ್ವ ಕಾಲೇಜು, ಪೀಣ್ಯ , ಬೆಂಗಳೂರಿನ ಪ್ರಾಚಾರ್ಯರು ಸಸ್ಪೆಂಡ್ ಆದ ಕಾರಣ ನಾನು ಸದರಿ ಕಾಲೇಜಿನ ಪ್ರಭಾರ ಪ್ರಾಚಾರ್ಯ ಎಂದು ಕೆಲಸ ಮಾಡಿದ್ದೇನೆ. ಕಾಲೇಜಿನ ಹೆಸರಿನಲ್ಲಿ ಒಟ್ಟು 3 ಖಾತೆಗಳು ಇದ್ದವು, ಒಂದು ಕಾಲೇಜು ಅಭಿವೃದ್ದಿ ಸಮಿತಿ ಖಾತೆ, ಎರಡು ಖಾತೆಗಳು ಇಲಾಖೆಗೆ ಸಂಬಂಧಪಟ್ಟ ಖಾತೆಗಳು ಇದ್ದವು.

2. ನಾನು ಪ್ರಭಾರ ಅಂತ ನಿರ್ವಹಿಸಿಕೊಂಡಾಗ ಚೆಕ್ ಬುಕ್ ಯಾವುದು ಇರಲಿಲ್ಲ, ಪಾಸಬುಕ್ ಗಳು ಇದ್ದವು. ನಮ್ಮ ಶಾಲಾ ಅಭಿವೃದ್ದಿ ಸಮಿತಿಯ ಖಾತೆ ಸಂಖ್ಯೆ. 404133465 ಆಗಿತ್ತು, ಸದರಿ ಖಾತೆಯನ್ನು ಪರಿಶೀಲಿಸಿದಾಗ ರೂ.1,12,052/- ಮೊತ್ತವನ್ನು ಹೈಸ್ಕೂಲ್ ಶಾಲಾ ಅಭಿವೃದ್ದಿ ಖಾತೆಗೆ ಜಮಾ ಆಗಿತ್ತು. ಅದನ್ನು ಇಂಡಿಯನ್ ಬ್ಯಾಂಕ್ ನವರು ವರ್ಗಾವಣೆ ಮಾಡಿದ್ದರು. ನಾವು ಬ್ಯಾಂಕ್ ಮ್ಯಾನೇಜರ್ ರವರನ್ನು

ವಿಚಾರಿಸಿದಾಗ ಹಿಂದಿನ ಪ್ರಾಚಾರ್ಯರಾಗಿದ್ದ ಆರೋಪಿ ರಾಮು ಪ್ರೌಢ ಶಾಲಾ ಅಭಿವೃದ್ಧಿ ಖಾತೆಯಿಂದ ಚೆಕ್ ಬುಕ್ ನ್ನು ಪಡೆದುಕೊಂಡು, ಅವರೇ ಇಟ್ಟುಕೊಂಡು ಒಂದು ರೂ.60,000/-, ಒಂದು ಬಾರಿ ರೂ.40,000/- ಹಣವನ್ನು ಡ್ರಾ ಮಾಡಿಕೊಂಡಿದ್ದರು. ಸದರಿ ಹಣವನ್ನು ಅವರು ಸ್ವಂತಕ್ಕೆ ಬಳಸಿಕೊಂಡಿದ್ದರು. ರೂ.8,741/- ನ್ನು ಮತ್ತು ರೂ.3,311/- ಮೊತ್ತವನ್ನು ಬರೆದು ಕೆ.ಇ.ಬಿ. ಗೆ ಕೊಟ್ಟಿದ್ದರು. ಹೈಸ್ಕೂಲ್ ಚೆಕ್ ಗಳಿಗೆ ಸಹಿ ಮಾಡಲು ಹೈಸ್ಕೂಲ್ ನ ಉಪಪ್ರಾಂಶುಪಾಲರಿಗೆ ಮಾತ್ರ ಹಕ್ಕು ಇರುತ್ತದೆ. ಇದರಿಂದ ಶಾಲಾ ಅಭಿವೃದ್ದಿಗೆ ನಷ್ಟ ಉಂಟಾಗಿರುತ್ತದೆ. ನಂತರ ಬ್ಯಾಂಕ್ ನವರು ನಮ್ಮ ಖಾತೆಯಿಂದ ಅವರ ಖಾತೆಗೆ ಸದರಿ ಮೊತ್ತವನ್ನು ವರ್ಗಾವಣೆ ಮಾಡಿದ್ದು ತಿಳಿಯಿತು. ಇದರಿಂದ ನಮ್ಮ ಸಂಸ್ಥೆಗೆ ನಷ್ಟ ಉಂಟಾಗಿರುತ್ತದೆ. ನಾನು ಈ ಕುರಿತು ದೂರನ್ನು ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ದೂರು ಆಗಿರುತ್ತದೆ. ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಇದರೊಂದಿಗೆ ಚಾಸಾ-1 ರವರ ಜೊತೆಗೆ ಸಹಿ ಮಾಡಿ ದೂರು ನೀಡಿರುತ್ತೇವೆ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆರೋಪಿ ರಾಮು ನ್ನು ನೋಡಿದರೆ ಗುರುತಿಸಿರುತ್ತೇನೆ. ಆತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಆತನ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ಎಮ್,ಎಸ್.ಪಿ. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ರೂ. 1,000/- ಖರ್ಚಿನೊಂದಿಗೆ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ಪುನಃ ದಿನಾಂಕ 10/01/2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ.ಎಲ್. ವಕೀಲರಿಂದಃ**

3. ನನ್ನನ್ನು ಫೆಬ್ರುವರಿ 2016 ರಲ್ಲಿ ಕಾಲೇಜಿಗೆ ಪ್ರಭಾರ ಪ್ರಾಂಶುಪಾಲ ಎಂದು ಮಾಡಿರುತ್ತಾರೆ, ಆದರೆ ನಿಖರವಾದ ದಿನಾಂಕ ನೆನಪಿಲ್ಲ. ಸದರಿ ಚೆಕ್ ಗಳನ್ನು ನಾನು ವೈಯಕ್ತಿಕವಾಗಿ ನೋಡಿಲ್ಲ ಎನ್ನುವುದು ಸರಿ. ನನಗೆ ಈ ಘಟನೆಯ ಬಗ್ಗೆ ವೈಯಕ್ತಿಕವಾಗಿ ಗೊತ್ತಿಲ್ಲ, ಚಾಸಾ-1 ರವರು ಹೇಳಿದ್ದಕ್ಕೆ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಪ್ರಭಾರ ವಹಿಸಿಕೊಂಡ ನಂತರ ಪಾಸಬುಕ್ ಗಳನ್ನು ಪರಿಶೀಲಿಸುವಾಗ ಅದರಲ್ಲಿ ತಪ್ಪು ಕಂಡು ಬಂದಿರುತ್ತದೆ, ನಾನು ನೋಡಿರುತ್ತೇನೆ. ಆರೋಪಿ ಡ್ರಾ ಮಾಡಿರುವ ಹಣವನ್ನು ಕಾಲೇಜಿನ ಬೆಸ್ಕಾಂ ಬಿಲ್, ವಾಟರ್ ಬಿಲ್ ಹಾಗೂ ಇತರೇ ಸಾಮಗ್ರಿಗಳ ಬಿಲ್ ಕೊಡಲು ಉಪಯೋಗಿಸಿರುತ್ತಾರೆ ಎಂದರೆ ನನಗೆ ಆ ರೀತಿ ಬಳಸಿದ್ದಕ್ಕೆ ಯಾವುದೇ ಓಚರ್ ಗಳು ಕಾಲೇಜಿನಲ್ಲಿ ಲಭ್ಯವಾಗಿಲ್ಲ ಎಂದು ಹೇಳುತ್ತಾರೆ.

4. ನಾನು ಬರುವ ಮುಂಚೆಯೇ ಈ ಪ್ರಕರಣದ ತನಿಖೆ ಪ್ರಾರಂಭವಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಡಿ.ಡಿ.ಪಿ.ಐ ಮತ್ತು ಬಿ.ಇ.ಓ ರವರು ಸಹ ಈ ಕುರಿತು ತನಿಖೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರಭಾರ ವಹಿಸಿದಾಗ ಯಾವುದೇ ಚೆಕ್ ಬುಕ್ ಇರಲಿಲ್ಲ. ನಾನು ಪ್ರಭಾರ ವಹಿಸಿಕೊಂಡಾಗ ನನಗೆ ಯಾವುದೇ ಓಚರ್ ಗಳು ಮತ್ತು ಯಾವುದೇ ಬಿಲ್ ಗಳು ಸಿಕ್ಕಿರುವುದಿಲ್ಲ. ನಾನು ಪ್ರಭಾರ ವಹಿಸಿಕೊಂಡಾಗ ಸ್ಟಾಕ್ ರೆಜಿಸ್ಟರ್ ಇತ್ತು ಇಲ್ಲವೋ ಎಂದು ನನಗೆ ನೆನಪಿಲ್ಲ. ನಾನು ಪ್ರಭಾರ ವಹಿಸಿಕೊಂಡು ಒಂದು ತಿಂಗಳವರೆಗೆ ಕರ್ತವ್ಯ ಸಲ್ಲಿಸಿದ್ದೇನೆ, ಆ ಸಮಯದಲ್ಲಿ ಬಿಲ್ ಗಳು ಬಾಕಿ ಇರುತ್ತವೆ ಎಂದು ಹೇಳಿ ನನಗೆ ಯಾವುದೇ ಬಿಲ್ ಗಳು ಬಂದಿಲ್ಲ. ಬಿಲ್ ಗಳು ಬಾಕಿ ಇತ್ತೊ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ.

5. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ವಿಚಾರಣೆ ಮಾಡಿರುತ್ತಾರೋ ಇಲ್ಲವೋ ಎಂದರೆ ನಾನು ದೂರು ಕೊಟ್ಟಿದ್ದೇನೆ. ದೂರು ಕೊಟ್ಟ ನಂತರ ನಾನು ಪೊಲೀಸರಿಗೆ ಪ್ರಕರಣದ ಬಗ್ಗೆ ವಿವರಣೆ ನೀಡಿದ್ದೇನೆ. ನಾನು ಎಷ್ಟು ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೇನೆ

ಎಂದು ನೆನಪಿಲ್ಲ, ಒಂದು ಅಥವಾ ಎರಡು ಬಾರಿ ಹೋಗಿರಬಹುದು. ಪೊಲೀಸರು ನನ್ನನ್ನು ಯಾವ ಯಾವ ದಾಖಲಾತಿಗಳು ಇರುತ್ತವೆ ಎಂದು ವಿಚಾರಣೆ ಮಾಡಿಲ್ಲ. ದಿನಾಂಕ 19/02/2016 ರ ದೂರಿನಲ್ಲಿ ಬ್ಯಾಂಕ್ ನವರ ತಪ್ಪು ಇರುತ್ತದೆ ಎಂದು ದೂರು ನೀಡಿರುತ್ತೇನೆ ಎಂದರೆ ಬ್ಯಾಂಕ್ ನವರು ತಪ್ಪು ಮಾಡಿರುತ್ತಾರೆ ಎಂದು ಹೇಳಿಲ್ಲ, ಬ್ಯಾಂಕ್ ನವರು ತಿಳಿಸಿರುತ್ತಾರೆ ಎಂದು ಹೇಳಿದ್ದೇನೆ. ದೂರಿನಲ್ಲಿ ತಿಳಿಸಿರುವ ಚೆಕ್ ನಂಬರ್ ಗಳನ್ನು ಬ್ಯಾಂಕ್ ನವರು ನನಗೆ ಖುದ್ದಾಗಿ ತೋರಿಸಿರುತ್ತಾರೆ, ನಾನು ಖುದ್ದಾಗಿ ನೋಡಿ ತಿಳಿದುಕೊಂಡಿರುತ್ತೇನೆ. 4 ಚೆಕ್ ಗಳನ್ನು ಸಾಕ್ಷಿಗೆ ತೋರಿಸಿ ಸದರಿ ಚೆಕ್ ಗಳಲ್ಲಿ ಕೆಳಗಡೆ ಪ್ರಿ ಯುನಿವರ್ಸಿಟಿ ಕಾಲೇಜು ಪೀಣ್ಯ ಎಂದು ಬರೆದಿದೆ ಎಂದರೆ ಸರಿ.

6. ಸದರಿ ಹಣ ಡ್ರಾ ಮಾಡಿಕೊಂಡ ನಂತರ ಆರೋಪಿ ಹಣವನ್ನು ಯಾವ ಕಾರಣಕ್ಕೆ ಬಳಸಿದ್ದಾರೆ ಎಂದು ಪರಿಶೀಲನೆ ಮಾಡಿದ್ದೀರಾ ಎಂದರೆ ಒಂದು ಚೆಕ್ ನ್ನು ಬೆಸ್ಕಾಂ ಗೆ ಮತ್ತು ಒಂದು ಚೆಕ್ ನ್ನು ವಾಟರ್ ಬಿಲ್ ಗೆ ಕೊಟ್ಟಿರುವುದಾಗಿ ಕಂಡು ಬಂದಿರುತ್ತದೆ, ಆದರೆ ಉಳಿದ ಎರಡು ಚೆಕ್ ಗಳಿಂದ ಪಡೆದ ಹಣ ಯಾವುದಕ್ಕೆ ಬಳಸಿದ್ದಾರೆ ಎಂದು ಪುರಾವೆ ಸಿಗಲಿಲ್ಲ. ನಾನು ಪ್ರಭಾರ ವಹಿಸಿಕೊಂಡಾಗ ಯಾವುದೇ ಓಚರ್ ಗಳು ಅಥವಾ ಬಾಕಿ ಬಿಲ್ ಗಳು ಅಲ್ಲಿ ಇರಲಿಲ್ಲ ಮತ್ತು ನಮ್ಮ ಮೇಲಾಧಿಕಾರಿಗಳು ಪರಿಶೀಲನೆಗಾಗಿ ತೆಗೆದುಕೊಂಡು ಹೋಗಿದ್ದರು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಪ್ರಭಾರ ವಹಿಸಿಕೊಂಡಾಗ ಕಛೇರಿಯಲ್ಲಿ 2015-16 ರ ಯಾವುದೇ ಓಚರ್ ಗಳು ಇರಲಿಲ್ಲ ಎಂದರೆ ಸರಿ. ಮೇಲಾಧಿಕಾರಿಗಳು ಓಚರ್ ಬುಕ್ ಮತ್ತು ಬಿಲ್ ಗಳು ತೆಗೆದುಕೊಂಡುಹೋಗಿದ್ದು, ಅದನ್ನು ನಮಗೆ ತಿಳಿಸಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಭಾರ ವಹಿಸಿಕೊಂಡಾಗ ಆ ಮೊದಲೇ ಆರೋಪಿ ಎಲ್ಲ ಬಿಲ್ ಗಳನ್ನು ಪಾವತಿ ಮಾಡಿದ್ದರು ಎಂದರೆ ಯಾವುದೇ ಪೇಮೆಂಟ್ ಬಾಕಿ ಇರಲಿಲ್ಲ.

7. 500 ರಿಂದ 600 ಕ್ಕಿಂತ ಹೆಚ್ಚಿನ ಮಕ್ಕಳು ಓದುತ್ತಿದ್ದರು ಎಂದರೆ ಸರಿ. ಕಾಲೇಜಿಗೆ ಬೇಕಾದ ವೆಚ್ಚವನ್ನು ಖರ್ಚು ಮಾಡುವ ಅಧಿಕಾರ ಪ್ರಾಂಶುಪಾಲರಿಗೆ ಇರುತ್ತದೆ ಎಂದರೆ ಖರ್ಚುಗಳಿಗೆ ಸಂಬಂಧಪಟ್ಟಂತೆ ಎರಡು ಖಾತೆಗಳು ಇರುತ್ತವೆ, ಒಂದು ಪರೀಕ್ಷಾ ಮತ್ತು ಇತರೆ

ಖರ್ಚುಗಳಿಗಾ ಅರೆಸರ್ಕಾರಿ ಶುಲ್ಕ ಎಂದು ಖರ್ಚು ಮಾಡಲಾಗುತ್ತದೆ, ಅದನ್ನು ಕಾಲೇಜು ಅಭಿವೃದ್ಧಿ ಖಾತೆಯಿಂದ ತೆಗೆದುಕೊಳ್ಳಲು ಬರುವುದಿಲ್ಲ, ಈ ಪ್ರಕರಣಕ್ಕೆ ಸಂಬಂದಪಟ್ಟ ಖಾತೆ ಕಾಲೇಜು ಅಭಿವೃದ್ಧಿ ಖಾತೆಯಾಗಿರುತ್ತದೆ, ಇದರಲ್ಲಿ ಬೆಂಚ್ ರಿಪೇರಿ, ಸ್ಕಾವೆಂಜರ್ಸ್, ಕಾಲೇಜು ವಾರ್ಷಿಕೊತ್ಸಕ್ಕೆ ಹಣ ಕಡಿಮೆ ಬಿದ್ದರೆ, ವಿದ್ಯುತ್ ಬಿಲ್ ಮತ್ತು ಇತರ ಬಿಲ್ ಗೆ ಕಡಿಮೆ ಬಿದ್ದರೆ ಮಾತ್ರ ಈ ಖಾತೆಯಿಂದ ತೆಗೆಯಬಹುದು. ಈ ಹಣವನ್ನು ತೆಗೆಯಬೇಕಾದರೆ ಕಾಲೇಜು ಅಭಿವೃದ್ಧಿ ಸಮಿತಿಯಿಂದ ಅನುಮೋದನೆ ತೆಗೆದುಕೊಳ್ಳಬೇಕು. ಸದರಿ ಖಾತೆ ಜಂಟಿ ಖಾತೆ ಇರಲಿಲ್ಲ ಎಂದರೆ ಸರಿ. ಅದರಲ್ಲಿ ಪ್ರಾಂಶುಪಾಲರೇ ಸಹಿ ಮಾಡಿ ಹಣ ತೆಗೆದುಕೊಳ್ಳುವ ಖಾತೆ ಇತ್ತು ಎನ್ನುವುದು ಸರಿ.

8. ನಾನು ಪ್ರಭಾರ ವಹಿಸಿಕೊಂಡಾಗ ಆರೋಪಿಯ ವಿರುದ್ದ ಹಣವನ್ನು ವೈಯಕ್ತಿಕವಾಗಿ ಬಳಸಿಕೊಂಡಿದ್ದಾನೆ ಎಂದು ದೂರು ದಾಖಲಾಗಿರಲಿಲ್ಲ ಎಂದರೆ ಸರಿ. ನಾನು ಪ್ರಭಾರ ವಹಿಸಿಕೊಂಡಾಗ ಅದಕ್ಕೂ ಮುಂಚೆ ನಮ್ಮ ಮೇಲಾಧಿಕಾರಿಗಳು ರೆಜಿಸ್ಟರ್ ಗಳನ್ನು ಪರಿಶೀಲನೆ ಮಾಡಿ ಆರೋಪಿಯ ವಿರುದ್ದ ಯಾವುದಾದರೂ ನೋಟ್ ಹಾಕಿರುತ್ತಾರೋ ಇಲ್ಲವೋ ಎಂಬುದನ್ನು ನಾನು ಗಮನಿಸಿಲ್ಲ. ನಾನು ಪ್ರಭಾರ ವಹಿಸಿಕೊಂಡಾಗ ಖಾತೆಗೂ ಮತ್ತು ಸ್ಟಾಕ್ ಬುಕ್ ಗೂ ಯಾವುದೇ ವ್ಯತ್ಯಾಸ ಬಂದಿಲ್ಲ ಎಂದರೆ ಕ್ಯಾಶ್ ಪುಸ್ತಕವನ್ನು ಬರೆದಿರಲಿಲ್ಲ. ಕ್ಯಾಶ್ ಪುಸ್ತಕ ಇತ್ತು ಇಲ್ಲವೋ ಎಂದರೆ ಸಾಕ್ಷಿ ಮೊದಲು ನೆನಪಿಲ್ಲ ಎಂದು ಹೇಳುತ್ತಾರೆ, ನಂತರ ಕ್ಯಾಶ ಪುಸ್ತಕ ಇರಲಿಲ್ಲ ಎಂದು ಹೇಳುತ್ತಾರೆ. ಆರೋಪಿ ಪ್ರತಿಯೊಂದು ಪೈಸೆಗೂ ಸಹ ಅಕೌಂಟ ರೆಜಿಸ್ಟರ್ ನ್ನು ಮೇಂಟೇನ್ ಮಾಡಿರುತ್ತಾರೆ, ಆದ್ದರಿಂದ ಅವರ ವಿರುದ್ದ ಯಾವುದೇ ದೂರುಗಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

9. 2016 ರಲ್ಲಿ ಆರೋಪಿ ತಮ್ಮ ಮೇಲಾಧಿಕಗಳ ವಿರುದ್ದ ಆರ್.ಟಿ.ಐ ಮೂಲಕ ಕೆಲವೊಂದು ಮಾಹಿತಿಯನ್ನು ಅಸಿಸ್ಟೆಂಟ್ ಡೈರೆಕ್ಟರ್, ಪ್ರಿ ಯುನಿವರ್ಸಿಟಿ ಬೆಂಗಳೂರು ಉತ್ತರ ಇವರ ಕಡೆಯಿಂದ ಪಡೆದಿದ್ದರು, ಆ ಕಾರಣಕ್ಕಾಗಿ ಆರೋಪಿಯ ವಿರುದ್ದ ತನಿಖೆ ಸಲುವಾಗಿ ಅವರ ಸಿಬ್ಬಂದಿಗಳನ್ನು ಕಾಲೇಜಿಗೆ ಕಳುಹಿಸಿ ಎಲ್ಲ ದಾಖಲೆಗಳನ್ನು ವಿಚಾರಣೆಗೊಸ್ಕರ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಹುದ್ದೆ

ಇರುವುದಿಲ್ಲ. ಈ ಖರ್ಚಿನ ಸಂಬಂಧಪಟ್ಟ ಆರೋಪಿ ಎಲ್ಲ ಅಕೌಂಟ್ ರೆಜಿಸ್ಟರ್ ಗಳನ್ನು ಮೇಂಟೇನ್ ಮಾಡಿದ್ದ ತನಿಖೆ ನೆಪದಲ್ಲಿ ಮೇಲಾಧಿಕಾರಿಗಳು ತೆಗೆದುಕೊಂಡು ಹೋಗಿದ್ದರಿಂದ ನನಗೆ ಯಾವುದೇ ಓಚರ್ ಗಳು, ಬಿಲ್ ಗಳು ಲಭ್ಯವಾಗಿಲ್ಲ ಎಂದರೆ ಸರಿಯಲ್ಲ. ಓಚರ್ ಮತ್ತು ಬಿಲ್ ಗಳು ಇಲ್ಲದೇ ಸರ್ಕಾರದಿಂದ ಯಾವುದೇ ಖರ್ಚು ಹಾಕಲು ಬರುವುದಿಲ್ಲ ಎಂದರೆ ಸರಿ. ಪ್ರಶ್ನೆ ಪತ್ರಿಕೆ ಮತ್ತು ಇತರೆ ಸಾಮಗ್ರಿಗಳಿಗೆ ಓಚರ್ ಮತ್ತು ಇಂಡೆಂಟ್ ಇಲ್ಲದೆ ಅವು ಕಾಲೇಜಿಗೆ ಬರುವುದಿಲ್ಲ ಎಂದರೆ ಸರಿ. ಆರೋಪಿ ಪ್ರಶ್ನೆ ಪತ್ರಿಕೆ ಮತ್ತು ಇತರೆ ಸಾಮಗ್ರಿಗಳಿಗೆ ಓಚರ್ ಗಳನ್ನು ಮತ್ತು ಇಂಡೆಂಟ್ ಗಳನ್ನು ಮಾಡಿರುತ್ತಾರೆ ಎಂದರೆ ಪ್ರಥಮ ಪಿ.ಯು.ಸಿ. ಪರೀಕ್ಷೆ ಶುಲ್ಕ ಪಾವತಿಸಿ ಪರೀಕ್ಷೆ ನಡೆಸಿದ್ದರು. ಪ್ರಶ್ನೆ ಪತ್ರಿಕೆಗೆ ಶುಲ್ಕ ವನ್ನು ಅರೆಸರ್ಕಾರಿ ಖಾತೆಯಿಂದ ತೆಗೆಯಲಾಗುತ್ತದೆ. ಅರೆಸರ್ಕಾರಿ ಖಾತೆಯಲ್ಲಿ ಹಣ ಇಲ್ಲದಿದ್ದಾಗ ಕಾಲೇಜು ಅಭಿವೃದ್ಧಿ ಖಾತೆಯಿಂದ ಹಣ ತೆಗೆಯುತ್ತೇವೆ ಎಂದರೆ ಸರಿ. ನಾನು ಪ್ರಭಾರ ವಹಿಸಿಕೊಂಡಾಗ ಪ್ರಶ್ನೆ ಪತ್ರಿಕೆಗಳನ್ನು ಯಾವ ಖಾತೆಯಿಂದ ಹಣ ನೀಡಿ ತಂದಿರುತ್ತಾರೆ ಎಂದು ಪರಿಶೀಲನೆ ಮಾಡಿಲ್ಲ.

10. ಯಾವ ಯಾವ ಖಾತೆಯಿಂದ ಎಷ್ಟು ಹಣ ಬಳಸಿರುತ್ತಾರೆ ಎಂದು ನಾನು ಪರಿಶೀಲನೆ ಮಾಡಿಲ್ಲ. ರೂ. 60,000/- ಮತ್ತು ರೂ, 40,000/- ಹಣವನ್ನು ಆರೋಪಿ ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂದು ಹೇಳಿರುವುದು ಯಾವ ಆಧಾರದ ಮೇಲೆ ಹೇಳಿದ್ದೀರಿ ಎಂದರೆ ಹಣದ ಖರ್ಚಿಗಾಗಿ ಪೂರಕ ದಾಖಲೆಗಳು ಇರಲಿಲ್ಲ ಆದ್ದರಿಂದ ಹೇಳಿದ್ದೇನೆ. ಆಡಿಟ್ ನ್ನು ಪ್ರತಿ ವರ್ಷ ಮಾಡುವುದಿಲ್ಲ, ಇಲಾಖೆಯವರು ಸೂಚಿಸಿದಾಗ ಮಾತ್ರ ಆಡಿಟ್ ಮಾಡುತ್ತಾರೆ. ಈ ಪ್ರಕರಣ ಆದಾಗಿನಿಂದ ಇಲ್ಲಿಯವರೆಗೆ ನಮ್ಮ ಇಲಾಖೆಯಿಂದ ಯಾವುದೇ ಆಡಿಟ್ ಮಾಡಿಲ್ಲ ಎನ್ನುವುದು ಸರಿ. ನಾನು ಪ್ರಭಾರ ವಹಿಸಿಕೊಂಡ ನಂತರ ಯಾವುದೇ ಆಡಿಟ್ ಮಾಡಿಲ್ಲ ಎನ್ನುವುದು ಸರಿ. ಯಾವುದೇ ಆಡಿಟ್ ಮಾಡದೇ ಆರೋಪಿ ರೂ,60,000/- ಮತ್ತು ರೂ. 40,000/- ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅದನ್ನು ಕಾಲೇಜಿಗೆ ವಿನಿಯೋಗಮಾಡಿರುತ್ತಾರೆ ಎಂದರೆ ಸರಿಯಲ್ಲ. ದೂರಿನಲ್ಲಿ ಆರೋಪಿ ಸದರಿ ಹಣವನ್ನು

ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂದು ಬರೆದಿಲ್ಲ ಎಂದರೆ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಬರೆದಿದ್ದೇನೆ, ಸ್ವಂತಕ್ಕೆ ಎಂದು ಬರೆದಿಲ್ಲ. ಮುನಿರತ್ನ ರವರ ಮಾತು ಕೇಳಿಕೊಂಡು ನಾನು ಮತ್ತು ರಮೇಶ ಪಟೇಲ್ ರವರು ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**